# ಕರ್ನಾಟಕ ಲೋಕಾಯುಕ್ತ

ನಂ. ಕಂಪ್ಲೆಂಟ್/ಉಪಲೋಕ್/ಬಿಜಿಎಮ್/3525/2021
ಮಂಡನಾಧಿಕಾರಿಗಳ ಶಾಖೆ, ಎಆರ್‌ಇ-18

ಬಹುಮಹಡಿಗಳ ಕಟ್ಟಡ,
ಡಾ॥ ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 08/05/2022.

10

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12 (3) ರನ್ವಯ ಶಿಫಾರಸ್ಸು ವರದಿ

ವಿಷಯ: ಶ್ರೀ ವಿಠ್ಠಲ ಬಸಪ್ಪ ಸವದತ್ತಿ, ಸಹಾಯಕ ಇಂಜಿನಿಯರ್(ವಿ) ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ ಹು.ವಿ.ಸ.ಕಂ.ನಿ., ಗೋಕಾಕ ಗ್ರಾಮೀಣ ಶಾಖೆ, ಬೆಳಗಾವಿ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧದ ನಡವಳಿ ಕುರಿತು.

1) ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ ಇವರ ಪತ್ರದೊಂದಿಗೆ ಕರ್ನಾಟಕ ಲೋಕಾಯುಕ್ತ, ಬೆಳಗಾವಿ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು (ಇನ್ನು ಮುಂದೆ ತನಿಖಾಧಿಕಾರಿ ಎಂದು ಉಲ್ಲೇಖಿಸಲಾಗುತ್ತದೆ.) ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ ಶ್ರೀ ವಿಠ್ಠಲ ಬಸಪ್ಪ ಸವದತ್ತಿ, ಸಹಾಯಕ ಇಂಜಿನಿಯರ್(ವಿ) ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ ಹು.ವಿ.ಸ.ಕಂ.ನಿ., ಗೋಕಾಕ ಗ್ರಾಮೀಣ ಶಾಖೆ, ಬೆಳಗಾವಿ ಜಿಲ್ಲೆ (ಇನ್ನು ಮುಂದೆ ಎದುರುದಾರರು ಎಂದು ಉಲ್ಲೇಖಿಸಲಾಗುತ್ತದೆ) ದೂರುದಾರರಾದ ಶ್ರೀ ಆರ್. ಬಿ. ಹವಾಲದಾರ್ ಪೊಲೀಸ್ ನೀರಿಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ (ಇನ್ನು ಮುಂದೆ ದೂರುದಾರರು ಎಂದು ಉಲ್ಲೇಖಿಸಲಾಗುತ್ತದೆ) ಇವರಿಗೆ ಬಂದ ಮಾಹಿತಿಯ ಮೇರೆಗೆ ಈ ಬಗ್ಗೆ ರಹಸ್ಯ ಮಾಹಿತಿಯನ್ನು ಸಂಗ್ರಹಿಸಿ ಸದರಿ ಮಾಹಿತಿಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ ರವರಿಗೆ ಸಲ್ಲಿಸಿ ಅವರಿಂದ ಆದೇಶ ಪಡೆದು ಆರಕ್ಷಕ ನಿರೀಕ್ಷಕರು ದೂರನ್ನು ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಎದುರುದಾರರಾದ ನೀವು ನಿಮ್ಮ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಆಸ್ತಿಗಳನ್ನು ಹೊಂದಿರುತ್ತೀರೆಂದು ತನಿಖಾಧಿಕಾರಿಗಳು ವರದಿ ಸಲ್ಲಿಸಿದ ಮೇರೆಗೆ, ದಾಖಲಾತಿಗಳನ್ನು ಪರಿಶೀಲಿಸಿದಾಗ, ಎದುರುದಾರರಾದ ನೀವು ನಿಮ್ಮ ಸೇವಾ ಅವಧಿಯಲ್ಲಿ ನೀವು ಖರೀದಿಸಿದ ಆಸ್ತಿಗಳ ಬಗ್ಗೆ ಮತ್ತು ಸಾಲ ಪಡೆದ ಬಗ್ಗೆ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮ 1966 ರ (ಪ್ರಸ್ತುತ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ ದುರ್ನಡತೆ ತೋರಿಸಿರುತ್ತೀರಿ ಎನ್ನುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 7(2) ರನ್ವಯ ಸ್ವಯಂ ಪ್ರೇರಿತ ತನಿಖೆ ಕೈಗೊಂಡಿರುತ್ತಾರೆ.

2) **ಪ್ರಕರಣದ ಸಂಕ್ಷಿಪ್ತ ಸಾರಾಂಶ:-** ದೂರುದಾರರಾದ ಪೊಲೀಸ್ ನಿರೀಕ್ಷಕರು, ಕರ್ನಾಟಕ ಲೋಕಾಯುಕ್ತ ಬೆಳಗಾವಿ ಜಿಲ್ಲೆರವರಿಗೆ ಬಂದ ಮಾಹಿತಿ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಸೋರ್ಸ್ ವರದಿಯನ್ನು ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಬೆಳಗಾವಿರವರಿಗೆ ಸಲ್ಲಿಸಿದ್ದು, ನಂತರ ಪೊಲೀಸ್ ಅಧೀಕ್ಷಕರು ಸೋರ್ಸ್ ವರದಿಯ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ, ಬೆಳಗಾವಿ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರಿಗೆ ಎದುರುದಾರರಾದ ನಿಮ್ಮ ವಿರುದ್ಧ ಸ್ವಯಂ ದೂರು ದಾಖಲಿಸಲು ಆದೇಶ ಮಾಡಿದ್ದು

ಅದರನ್ವಯ ಬೆಳಗಾವಿ ಠಾಣೆಯ ಗುನ್ನೆ ನಂ. 04/2014 ರಲ್ಲಿ ಕಲಂ 13 (1)(ಇ) ಸಹ ಕಲಂ 13(2) ಪಿ.ಸಿ. ಕಾಯಿದೆ 1988 ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

3) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ದಿನಾಂಕ 04/04/1986 ರಿಂದ ದಿ: 28/03/2014 ರ ವರೆಗೆ ತಮ್ಮ, ತಮ್ಮ ಪತ್ನಿ ಹಾಗೂ ಮಗನ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿ ಹಾಗೂ ಚರಾಸ್ತಿಗಳನ್ನು ಸಂಪಾದಿಸಿರುತ್ತೀರೆಂದು ವರದಿಯಲ್ಲಿ ತಿಳಿಸಿರುತ್ತಾರೆ.

| | |
|---|---|
| 1 | ಎದುರುದಾರರು ತಮ್ಮ ಪತ್ನಿಯಾದ ಶ್ರೀಮತಿ ಶಾಂತಾ @ ಶಾಂತವ್ವಾ ಹೆಸರಿನಲ್ಲಿ ಗೋಕಾಕ ಗ್ರಾಮ ರಿಸ.ನಂ. 304/3ಬ ಕ್ಷೇತ್ರ 20 ಗುಂಟೆ ಜಮೀನನ್ನು ದಿ: 19-03-1999 ರಂದು ರೂ. 60,500/- ಕ್ಕೆ ಖರೀದಿಸಿರುತ್ತಾರೆ. |
| 2 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ಗ್ರಾಮ ರಿಸ.ನಂ. 304/3ಬ ಕ್ಷೇತ್ರ 10 ಗುಂಟೆ ಮತ್ತು ರಿಸ.ನಂ.304/2 ಕ್ಷೇತ್ರ 10 ಗುಂಟೆ ಜಮೀನನ್ನು ದಿ: 06-08-1998 ರಂದು ರೂ. 30,000/- ಕ್ಕೆ ಖರೀದಿಸಿರುತ್ತಾರೆ. |
| 3 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿರುವ ಗೋಕಾಕ ತಾಲ್ಲೂಕಿನ ಬಿಲಕುಂಡಿ ಗ್ರಾಮ ರಿಸ.ನಂ. 262 ಕ್ಷೇತ್ರ 2 ಎಕರೆ 20 ಗುಂಟೆ ಜಮೀನನ್ನು ದಿ:31-12-2008 ರಂದು ರೂ. 1 ಲಕ್ಷ 25 ಸಾವಿರಕ್ಕೆ ಖರೀದಿಸಿರುತ್ತಾರೆ. |
| 4 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿರುವ ಗೋಕಾಕ ತಾಲ್ಲೂಕಿನ ಬಿಲಕುಂಡಿ ಗ್ರಾಮ ರಿಸ.ನಂ. 307 ಕ್ಷೇತ್ರ 1 ಎಕರೆ ಜಮೀನನ್ನು ದಿ: 23/09/2003 ರಂದು ರೂ. 85 ಸಾವಿರಕ್ಕೆ ಖರೀದಿಸಿರುತ್ತಾರೆ. |
| 5 | ಎದುರುದಾರರು ತಮ್ಮ ಮಗನಾದ ಪ್ರವೀಣ ಈತನ ಅ.ಸ.ದಾ.ರ ತಾಯಿಯಾದ ಶ್ರೀಮತಿ ಶಾಂತಾ @ ಶಾಂತವ್ವಾ ರವರ ಹೆಸರಿನಲ್ಲಿ ದಿ: 15-04-2006 ರಂದು ರೂ. 3ಲಕ್ಷ 8ಸಾವಿರಕ್ಕೆ ಖರೀದಿಸಿರುತ್ತಾರೆ. |
| 6 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿರುವ ಗೋಕಾಕ ತಾಲ್ಲೂಕಿನ ಬಿಲಕುಂಡಿ ಗ್ರಾಮದ ರಿಸ.ನಂ. 262/2 ಕ್ಷೇತ್ರ 1 ಎಕರೆ 20 ಗುಂಟೆ ಜಮೀನನ್ನು ದಿ: 31-12-2011 ರಂದು ರೂ. 1 ಲಕ್ಷಕ್ಕೆ ಖರೀದಿಸಿರುತ್ತಾರೆ. |
| 7 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಬಿಲಕುಂದಿ ಗ್ರಾಮ ರಿಸ.ನಂ. 262/02 ಕ್ಷೇತ್ರ 1 ಎಕರೆ ಜಮೀನನ್ನು ದಿ: 08-06-2011 ರಂದು ರೂ. 40 ಸಾವಿರಕ್ಕೆ ಖರೀದಿಸಿರುತ್ತಾರೆ. |
| 8 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿರುವ ಗೋಕಾಕ ತಾಲ್ಲೂಕಿನ ಬಿಲಕುಂದಿ ಗ್ರಾಮ ರಿಸ.ನಂ.5 ಕ್ಷೇತ್ರ 4 ಎಕರೆ 17 ಗುಂಟೆ ಜಮೀನನ್ನು ದಿ: 27-11-2012 ರಂದು ರೂ. 5 ಲಕ್ಷಕ್ಕೆ ಖರೀದಿಸಿರುತ್ತಾರೆ. |
| 9 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಬಿಲಕುಂದಿ ಗ್ರಾಮ ರಿಸ.ನಂ. 245 ಕ್ಷೇತ್ರ 1 ಎಕರೆ 12 ಗುಂಟೆ ಜಮೀನನ್ನು ದಿ: 09-05-2012 ರಂದು ರೂ. 2 ಲಕ್ಷಕ್ಕೆ ಖರೀದಿಸಿರುತ್ತಾರೆ. |
| 10 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಬಿಲಕುಂದಿ ಗ್ರಾಮ ರಿಸ.ನಂ. 245 ಕ್ಷೇತ್ರ 1 ಎಕರೆ 12 ಗುಂಟೆ ಜಮೀನನ್ನು ದಿ: 09-05-2012 ರಂದು ರೂ. 2ಲಕ್ಷಕ್ಕೆ ಖರೀದಿಸಿರುತ್ತಾರೆ. |
| 11 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ತಳಕಟ್ನಾಳ ಗ್ರಾಮ ರಿಸ.ನಂ. 227/3 ಕ್ಷೇತ್ರ 1 ಎಕರೆ ಜಮೀನನ್ನು ದಿ: 09-09-2011 ರಂದು ರೂ. 2ಲಕ್ಷ 50 ಸಾವಿರಕ್ಕೆ ಖರೀದಿಸಿರುತ್ತಾರೆ. |
| 12 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ತಳಕಟ್ನಾಳ ಗ್ರಾಮ ರಿಸ.ನಂ. 227/3 ಕ್ಷೇತ್ರ 2 ಎಕರೆ ಜಮೀನನ್ನು ದಿ: 07-09-2010 ರಂದು ರೂ. 3ಲಕ್ಷ 55 ಸಾವಿರಕ್ಕೆ ಖರೀದಿಸಿರುತ್ತಾರೆ. |

| | |
|---|---|
| 13 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ತಳಕಟ್ನಾಳ ಗ್ರಾಮ ರಿಸ.ನಂ. 182/3ಅ ಕ್ಷೇತ್ರ 3 ಎಕರೆ 12 ಗುಂಟೆ ಜಮೀನನ್ನು ದಿ: 15-05-2012 ರಂದು ರೂ. 6 ಲಕ್ಷಕ್ಕೆ ಖರೀದಿಸಿರುತ್ತಾರೆ. |
| 14 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಹಿರೆನಂದಿ ಗ್ರಾಮ ರಿಸ.ನಂ. 399 ಕ್ಷೇತ್ರ 1 ಎಕರೆ 05 ಗುಂಟೆ ಜಮೀನನ್ನು ದಿ: 16-03-2013 ರಂದು ರೂ. 4 ಲಕ್ಷ 50 ಸಾವಿರಕ್ಕೆ ಖರೀದಿಸಿರುತ್ತಾರೆ. |
| 15 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಪಂಚನಾಯ್ಕನಹಟ್ಟಿ ಗ್ರಾಮ ರಿಸ.ನಂ. 153/1 ಕ್ಷೇತ್ರ 1 ಎಕರೆ 36 ಗುಂಟೆ ಜಮೀನನ್ನು ದಿ: 09-11-2011 ರಂದು ರೂ. 3 ಲಕ್ಷಕ್ಕೆ ಖರೀದಿಸಿರುತ್ತಾರೆ. |
| 16 | ಎದುರುದಾರರು ತಮ್ಮ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಬಿಲಕುಂದಿ ಗ್ರಾಮ ರಿಸ.ನಂ. 264 ಕ್ಷೇತ್ರ 1 ಎಕರೆ ಜಮೀನನ್ನು ದಿ: 19-05-2010 ರಂದು ರೂ. 2 ಲಕ್ಷ 10 ಸಾವಿರಕ್ಕೆ ಖರೀದಿಸಿರುತ್ತಾರೆ. |
| 17 | ಎದುರುದಾರರು ತಮ್ಮ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಬಿಲಕುಂದಿ ಗ್ರಾಮ ರಿಸ.ನಂ. 245 ಕ್ಷೇತ್ರ 1 ಎಕರೆ 12 ಗುಂಟೆ ಜಮೀನನ್ನು ದಿ: 23-03-2009 ರಂದು ರೂ. 1 ಲಕ್ಷ 72 ಸಾವಿರಕ್ಕೆ ಖರೀದಿಸಿರುತ್ತಾರೆ. |
| 18 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಬಿಲಕುಂದಿ ಗ್ರಾಮ ರಿಸ.ನಂ. 358/ಎ/13 ಕ್ಷೇತ್ರ 06 ಎಕರೆ 03 ಗುಂಟೆ ಜಮೀನನ್ನು ದಿ: 28-05-2004 ರಂದು ರೂ. 3 ಲಕ್ಷ 31 ಸಾವಿರಕ್ಕೆ ಖರೀದಿಸಿರುತ್ತಾರೆ. |
| 19 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಬಿಲಕುಂದಿ ಗ್ರಾಮ ರಿಸ.ನಂ. 184 ಕ್ಷೇತ್ರ 2 ಎಕರೆ ಜಮೀನನ್ನು ದಿ: 30-05-2011 ರಂದು ರೂ. 2 ಲಕ್ಷ 60 ಸಾವಿರಕ್ಕೆ ಖರೀದಿಸಿರುತ್ತಾರೆ. |
| 20 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ನಗರಸಭಾ ಹದ್ದಿಯ ಶ್ರೀ ಮಹಾಲಕ್ಷ್ಮಿ ಬಡಾವಣೆ ಪ್ರದೇಶ ವ್ಯಾಪ್ತಿಯಲ್ಲಿಯ ಜಿ.ಆರ್.ಬಿ.ಸಿ ಆಫೀಸಿನ ಎದುರುಗಡೆ ಇರುವ ಖುಲ್ಲಾ ಜಾಗ, ಗೋಕಾಕ ರಿಸ.ನಂ. 288/1 ಪ್ಲಾಟ್.ನಂ. 39 ಕ್ಷೇತ್ರ 40 ಪುಟ್ 9 ಇಂಚ್ * 61 ಪುಟ್ ಜಾಗವನ್ನು ದಿ: 22-04-1999 ರಂದು ರೂ. 2 ಲಕ್ಷ 25 ಸಾವಿರಕ್ಕೆ ಖರೀದಿಸಿರುತ್ತಾರೆ. |
| 21 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ರಿಸ.ನಂ. 288/1 ಪ್ಲಾಟ್.ನಂ. 39 ಕ್ಷೇತ್ರ 40 ಪುಟ್ 9 ಇಂಚ್ * 61 ಪುಟ್ ಜಾಗವನ್ನು ದಿ: 22-04-1999 ರಂದು ರೂ. 2 ಲಕ್ಷ 25 ಸಾವಿರಕ್ಕೆ ಖರೀದಿಸಿ ಅದರಲ್ಲಿ ಸನ್ 2001 ರಲ್ಲಿ ಭವ್ಯವಾದ ಮನೆಯನ್ನು ನಿರ್ಮಿಸಿ ಮನೆಗೆ "ಮಾತಾ ಪಿತೃ ಕೃಪಾ" ಎಂಬ ಹೆಸರಿನಲ್ಲಿ ಮನೆಯನ್ನು ರೂ. 15 ಲಕ್ಷಕ್ಕೆ ನಿರ್ಮಿಸಿರುತ್ತಾರೆ. |
| 22 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ಟೌನ್ ರಿಸ.ನಂ. 381/ಅ ಪ್ಲಾಟ್ ನಂ. 212 ಕ್ಷೇತ್ರ 0-01-01-01(1162ಚ.ಅಡಿ)ಯನ್ನು ದಿ: 21-05-2013ರಂದು ರೂ. 2 ಲಕ್ಷ 16 ಸಾವಿರಕ್ಕೆ ಖರಿದೀಸಿರುತ್ತಾರೆ. |
| 23 | ಎದುರುದಾರರು ತಮ್ಮ ಪತ್ನಿಯ ಹೆಸರಿನಲ್ಲಿ ಗೋಕಾಕ ತಾಲ್ಲೂಕಿನ ಮುಸಗುಪ್ಪಿ ಗ್ರಾಮ ಪಂಚಾಯತಿ ಖಾತಾ.ನಂ. 184ಎ ಕ್ಷೇತ್ರ 33 * 12 (396ಚ.ಅಡಿ)ಯನ್ನು ದಿ: 12-10-2012 ರಂದು ರೂ. 2 ಲಕ್ಷಕ್ಕೆ ಖರಿದೀಸಿರುತ್ತಾರೆ. |
| 24 | ಎದುರುದಾರರು ತಮ್ಮ ಹೆಸರಿನಲ್ಲಿ ತೋಟದ ಮನೆಯನ್ನು ರೂ. 5 ಲಕ್ಷಕ್ಕೆ ನಿರ್ಮಿಸಿರುತ್ತಾರೆ. |

| | |
|---|---|
| 25 | ಎದುರುದಾರರು ತಮ್ಮ ಹೆಸರಿನಲ್ಲಿ ಸೂಪರ್ ಸ್ಪ್ಲೆಂಡರ್ ಮೋಟರ್ ಸೈಕಲ್ ನಂ. ಕೆ.ಎ. 49-ಹೆಚ್-4874 ನ್ನು ರೂ. 52 ಸಾವಿರಕ್ಕೆ ಖರೀದಿಸಿರುತ್ತಾರೆ. |
| 26 | ಎದುರುದಾರರು ತಮ್ಮ ಹೆಸರಿನಲ್ಲಿ ಟಿ.ವಿ.ಎಸ್ ಸ್ಕೂಟಿ ಪೆಪ್ ಮೋಟರ್ ಸೈಕಲ್ ನಂ. ಕೆ.ಎ. 49-ಹೆಚ್-183 ನ್ನು ರೂ. 36 ಸಾವಿರಕ್ಕೆ ಖರೀದಿಸಿರುತ್ತಾರೆ. |
| 27 | ಎದುರುದಾರರು ತಮ್ಮ ಹೆಸರಿನಲ್ಲಿ ಪ್ಯಾಷನ್ ಪ್ರೋ ಮೋಟರ್ ಸೈಕಲ್ ನ್ನು ರೂ. 52 ಸಾವಿರಕ್ಕೆ ಖರೀದಿಸಿರುತ್ತಾರೆ. |
| 28 | ಎದುರುದಾರರು ತಮ್ಮ ಹೆಸರಿನಲ್ಲಿ ಕೆ.ಪಿ.ಟಿ.ಸಿ.ಎಲ್ ನೌಕರರ ಸಂಘ ಘಟಪ್ರಭಾ ದಲ್ಲಿ ಶೇರನ್ನು ರೂ. 69 ಸಾವಿರ ಐದುನೂರಕ್ಕೆ ಖರೀದಿಸಿರುತ್ತಾರೆ. |
| 29 | ಎದುರುದಾರರು ತಮ್ಮ ಹೆಸರಿನಲ್ಲಿ ಧನಲಕ್ಷ್ಮೀ ಸಕ್ಕರೆ ಕಾರ್ಖಾನೆ ಖಾನ್ ಪೇಠದಲ್ಲಿ ಶೇರನ್ನು ರೂ. 5 ಸಾವಿರಕ್ಕೆ ಖರೀದಿಸಿರುತ್ತಾರೆ. |
| 30 | ಎದುರುದಾರರು ತಮ್ಮ ಹೆಸರಿನಲ್ಲಿ ರೇಣುಕಾ ಶುಗರ್ಸ್‌ನಲ್ಲಿ ಶೇರನ್ನು ರೂ. 20 ಸಾವಿರಕ್ಕೆ ಖರೀದಿಸಿರುತ್ತಾರೆ. |
| 31 | ಎದುರುದಾರರು ತಮ್ಮ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತೆಯಲ್ಲಿ ನಗದು ರೂ. 89,698/- ಗಳನ್ನು ಇಟ್ಟಿರುತ್ತಾರೆ. |
| 32 | ಎದುರುದಾರರು ತಮ್ಮ ಸಿಂಡಿಕೇಟ್ ಬ್ಯಾಂಕ್ ಖಾತೆಯಲ್ಲಿ ನಗದು ರೂ. 1,67,006/- ಗಳನ್ನು ಇಟ್ಟಿರುತ್ತಾರೆ. |

4) ಎದುರುದಾರರು ತಮ್ಮ ಸೇವಾ ಅವಧಿಯಲ್ಲಿ ಆಸ್ತಿ ಮತ್ತು ದಾಯಿತ್ವದ ಪಟ್ಟಿಗಳನ್ನು ನೇಮಿಸಲಾದ ಪ್ರಾಧಿಕಾರಕ್ಕೆ ಸಲ್ಲಿಸಬೇಕಾಗಿದ್ದು, ಈ ವರೆಗೆ ಯಾವುದೇ ಮಾಹಿತಿಯನ್ನು ಸಲ್ಲಿಸಿರುವುದಿಲ್ಲ.

5) ಎದುರುದಾರರು ತಮ್ಮ ಸೇವಾ ಅವಧಿಯಲ್ಲಿ ತಮ್ಮ, ತಮ್ಮ ಪತ್ನಿ ಹಾಗೂ ಮಗನ ಹೆಸರಿನಲ್ಲಿ ಪ್ಯಾರಾ 2 ರ 1 ರಿಂದ 32 ಸ್ಥಿರಾಸ್ತಿ ಮತ್ತು ಚರಾಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ನೇಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಖರೀದಿಸಿದ್ದು ಮತ್ತು ನೇಮಿಸಲಾದ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸದೇ ಇರುವುದರಿಂದ ನಿಯಮ 23 (2)(3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ನಿಯಮ 24(3)ರನ್ವಯ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ರ ನಿಯಮಗಳನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿರುವುದು ಮತ್ತು ಪ್ರಸ್ತುತ ಕ.ನಾ.ಸೇ.(ನಡತೆ) ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ.

6) ತನಿಖಾಧಿಕಾರಿಗಳು ಎದುರುದಾರರು ಹೊಂದಿದ ಆಸ್ತಿ ಮತ್ತು ದಾಯಿತ್ವದ ಬಗ್ಗೆ ಪೂರ್ಣ ವಿವರಣೆ ಕೇಳಿ ಅನುಭಂಧಗಳಲ್ಲಿ ಮಾಹಿತಿಯನ್ನು ಕೋರಿದ್ದು ಎದುರುದಾರರು ಮಾಹಿತಿ ಹಾಗೂ ವಿವರಣೆಯನ್ನು ಸಲ್ಲಿಸಿರುತ್ತಾರೆ. ಆದರೆ ಸದರಿ ವಿವರಣೆಯಲ್ಲಿ ತೃಪ್ತಿದಾಯಕ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ನೀಡಿರುವುದಿಲ್ಲ.

7) ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಿಂದ ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಅಸಮತೋಲನವಾಗಿ ಆಸ್ತಿಗಳನ್ನು ತಮ್ಮ, ತಮ್ಮ ಪತ್ನಿ ಹಾಗೂ ಮಗನ ಹೆಸರಿನಲ್ಲಿ ಹೊಂದಿರುವುದು; ಅನುಮತಿ ಇಲ್ಲದೆ ಸ್ಥಿರಾಸ್ತಿ/ಚರಾಸ್ತಿಯನ್ನು ಖರೀದಿಸಿರುವುದು ಹಾಗೂ ಇತರೆ ಅಂಶಗಳು ಎದುರುದಾರರು ನಿಯಮಗಳನ್ನು ಪಾಲಿಸದೇ ದುರ್ನಡತೆಯನ್ನು ತೋರಿಸಿರುವುದು ಕಂಡುಬರುತ್ತದೆ.

8) ನಂತರ ಎದುರುದಾರರಿಗೆ ದಿ: 25-11-2021 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರು ತಮ್ಮ ಸಮಜಾಯಿಷಿಯನ್ನು ದಿ: 03-03-2022 ರಂದು ಸಲ್ಲಿಸಿದ್ದು, ಅದನ್ನು ಪರಿಶೀಲಿಸಿದಾಗ "ತಾನು ದಿ: 04-04-1986 ರಂದು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಮೀಟರ್ ರೀಡರ್/ಆಪರೇಟರ್ ಆಗಿ ನೇಮಕವಾಗಿರುತ್ತೇನೆ. ಮುಂದೆ ಬಡ್ತಿಗಳನ್ನು ಹೊಂದಿ ಸಹಾಯಕ ಅಭಿಯಂತರರಾಗಿ ದಿ: 30-09-2019 ರಂದು ನಿವೃತ್ತಿಯಾಗಿರುತ್ತೇನೆ. ನಿವೃತ್ತಿಯಾದ ಮೇಲೆ ತನಗೆ ಕ.ವಿ.ಪ್ರ.ನಿ.ನಿಯಮಿತದ ನೌಕರರ ಸೇವಾ (ನಡತೆ) ನಿಯಮಾವಳಿ-1988 ಅನ್ವಯವಾಗುವುದಿಲ್ಲ ಈ ಸೇವಾ (ನಡತೆ) ನಿಯಮಾವಳಿಗಳು ಸೇವೆಯಲ್ಲಿರುವ ನೌಕರರಿಗೆ ಮಾತ್ರ ಅನ್ವಯಿಸುತ್ತವೆ. ಸೇವೆಯಿಂದ ನಿವೃತ್ತಿಯಾದ ತನಗೆ ಮಂಡಳಿಯ ಸೇವಾ(ನಡತೆ) ನಿಯಮಾವಳಿಗಳಾಗಲಿ ಕರ್ನಾಟಕ ಸೇವಾ (ನಡತೆ) ನಿಯಮಾವಳಿಗಳಾಗಲಿ ಅನ್ವಯಿಸುವುದಿಲ್ಲ. ತಾನು ತನ್ನ ನೇಮಕಾತಿ ಪ್ರಾಧಿಕಾಸ್ತರ ಸೇವೆಯಿಂದ ನಿವೃತ್ತನಾದ ಮೇಲೆ ತನಗೆ ನೇಮಕಾತಿ ಪ್ರಾಧಿಕಾರಸ್ತರಾಗಲಿ, ಶಿಸ್ತು ಪ್ರಾಧಿಕಾರಸ್ತರಾಗಲಿ ಇಲಾಖಾ ವಿಚಾರಣೆ ಮಾಡಲಿಕ್ಕೆ ಯಾವುದೇ ನಿಯಮಗಳಲ್ಲಿ ಕಾನೂನಿನಲ್ಲಿ ಅಧಿಕಾರವನ್ನು ಹೊಂದಿರುವುದಿಲ್ಲ. ಕರ್ನಾಟಕ ವಿದ್ಯುತ ಪ್ರಸರಣ ನಿಗಮದ ನೌಕರರಿಗೆ ಇಲಾಖಾ ವಿಚಾರಣೆ ಮಾಡುವ ಬಗ್ಗೆ ಪ್ರಸ್ತಾವನೆ ಇಲ್ಲ, ತನ್ನ ಮೇಲೆ ಈಗಾಗಲೇ ಬೆಳಗಾವಿ ಜಿಲ್ಲಾ ನ್ಯಾಯಾಲಯದಲ್ಲಿ ಇದೇ ವಿಷಯಕ್ಕೆ ಸಂಬಂಧಪಟ್ಟಂತೆ ವಿಚಾರಣೆ ನಡೆಯುತ್ತಿದೆ ಎಂದು ಹೇಳಿ ಆಪಾದನೆಗಳನ್ನು ಅಲ್ಲಗಳೆಯುವುದರ ಹೊರತಾಗಿ ಅದಕ್ಕೆ ಪೂರಕವಾದ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ. ಈ ಪ್ರಕರಣವು ಲೋಕಾಯುಕ್ತ ಸಂಸ್ಥೆಯಿಂದ ರೆಡ್ ಆದ ಪ್ರಕರಣವಾಗಿದ್ದು, ಎದುರುದಾರರು ತೆಗೆದುಕೊಂಡ ಡಿಪೆನ್ಸನ್ನು ಒಪ್ಪಲು ಬರುವುದಿಲ್ಲ. ಆದುದ್ದರಿಂದ, ಎದುರುದಾರರು ನೀಡಿರುವ ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳು ಕಂಡು ಬರುವುದಿಲ್ಲ.

9) ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ, ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆಗಳು ಇವುಗಳನ್ನು ಪರಿಶೀಲಿಸಿದಾಗ ಎದುರುದಾರರು ತಮ್ಮ ಸೇವಾ ಅವಧಿಯ ಕಾಲ ಅಂದರೆ 04-04-1986 ರಿಂದ 28-03-2014 ರ ಮಧ್ಯೆ ಗಳಿಸಿರುವ ಸ್ಥಿರಾಸ್ತಿ ಮತ್ತು ಚರಾಸ್ತಿಯನ್ನು ಖರೀದಿಸಿರುವ ಪೂರ್ವದಲ್ಲಿ ನೇಮಿಸಲಾದ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಖರೀದಿಸಿದ್ದು, ಮತ್ತು ನೇಮಿಸಲಾದ ಪ್ರಾಧಿಕಾರಕ್ಕೆ ಮಾಹಿತಿ ಸಲ್ಲಿಸದೇ ಇರುವುದರಿಂದ ಎದುರುದಾರರು ತಮ್ಮ ಕರ್ತವ್ಯದಲ್ಲಿ ನೀತಿ, ನಿಷ್ಠೆ ಮತ್ತು ಶ್ರದ್ಧೆಯನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ನಿಯಮ 23(2)(3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966ರ (ಪ್ರಸ್ತುತ ನಿಯಮ 24(3) ರನ್ವಯ ಕರ್ನಾಟಕ ನಾಗರಿಕ ಸೇವಾ(ನಡತೆ) ನಿಯಮಗಳು 2021) ನಿಯಮಗಳನ್ನು ಪಾಲಿಸದೆ ಕರ್ತವ್ಯ ಲೋಪವೆಸಗಿರುವುದು ಮತ್ತು ಪ್ರಸ್ತುತ ಕ.ನಾ.ಸೇ.(ನಡತೆ) ನಿಯಮ 3 (1) (i) ರಿಂದ (iii) ನ್ನು ಉಲ್ಲಂಘಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಆದುದರಿಂದ ಎದುರುದಾರರ ಮೇಲೆ ಇಲಾಖಾ ವಿಚಾರಣೆ ನಡೆಸಲು ಸಂಬಂಧಪಟ್ಟ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತವೆಂದು ಕಂಡುಬರುತ್ತದೆ.

10) ಈ ಮೇಲ್ಕಂಡ ಅಂಶಗಳಿಂದಾಗಿ ಎದುರುದಾರರಾದ ಶ್ರೀ ವಿಠ್ಠಲ ಬಸಪ್ಪ ಸವದತ್ತಿ, ಸಹಾಯಕ ಇಂಜಿನಿಯರ್(ವಿ) ಶಾಖಾಧಿಕಾರಿ, ಕಾರ್ಯ ಮತ್ತು ಪಾಲನೆ ಹು.ವಿ.ಸ.ಕಂ.ನಿ., ಗೋಕಾಕ ಗ್ರಾಮೀಣ ಶಾಖೆ, ಬೆಳಗಾವಿ ಜಿಲ್ಲೆ ಇವರುಗಳ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಕರ್ನಾಟಕ ನಾಗರೀಕ ಸೇವಾ ನಿಯಮ 214 (2) (ಬಿ) (i) ಅಡಿಯಲ್ಲಿ ಶಿಸ್ತು ನಡವಳಿಕೆಯನ್ನು

ನಡವಳಿಕೆಯನ್ನು ಆರಂಭಿಸಿ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ ನಿಯಮ 214 (2) (ಬಿ) (iii) ರ ಅಡಿಯಲ್ಲಿ ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದ ಅಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ ಶಿಸ್ತು ಪ್ರಾಧಿಕಾರವು ಈ ವರದಿಯ ಅನ್ವಯ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಿರುವ ಕ್ರಮದ ಬಗ್ಗೆ ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

10/5/22

**(ನ್ಯಾಯಮೂರ್ತಿ ಬಿ.ಎಸ್.ಪಾಟೀಲ)**
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು.